## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 235/2023

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಾಬರ್ಟ್ | ಸಿಡಬ್ಲ್ಯೂ: 5 | ಪಿಡಬ್ಲ್ಯೂ: 5 |
| ತಂದೆಯ ಹೆಸರು | ಸೆಲ್ವರಾಜ್ | | |
| ವಯಸ್ಸು | 40 ವರ್ಷ | | |
| ಕೆಲಸ | ಕಾಮಗಾರಿ | | |
| ವಾಸಸ್ಥಳ | ಉದಯನಗರ, ಹುಣಸೂರು | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1 ರಿಂದ 4 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ನಾವೆಲ್ಲರೂ ಒಂದೇ ಊರಿನವರು. ದಿಃ 31.01.2023ರಂದು ಚಾಸಾ-2 ರವರ ಮನೆಯ ಎದುರುಗಡೆ ರಾತ್ರಿ 9.30 ರಿಂದ 1.00 ಗಂಟೆ ಸಮಯದಲ್ಲಿ ಗಲಾಟೆಯಾಗಿತ್ತು. ಚಾಸಾ-4 ಮತ್ತು ಆರೋಪಿ ಜಗಳ ಮಾಡುತ್ತಿದ್ದರು. ನಾನು ಜಗಳವನ್ನು ಬಿಡಿಸಿ ಆರೋಪಿಯನ್ನು ಕರೆದುಕೊಂಡು ಅವರ ಮನೆಗೆ ಬಿಟ್ಟಿದ್ದೇನೆ. ಸದರಿ ಜಗಳದಲ್ಲಿ ಯಾರು ಯಾರಿಗೆ ಹೊಡೆಯುತಿದ್ದರು ಎಂದು ನೋಡಿಲ್ಲ, ಇಬ್ಬರು ಜಗಳ ಮಾಡುತ್ತಿದ್ದರು. ನಾನು ಈ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ .

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

### ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ಮೇಲೆ ಹೇಳಿದ ದಿನಾಂಕದಂದು ರಾತ್ರಿ 10.05 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಚಾಸಾ-4 ರವರ ಮನೆಯ ಮುಂದೆ ಚಾಸಾ-3 ರವರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ಆಕ್ಟಿವಾ ಸ್ಕೂಟರ್ ನಲ್ಲಿ ವೇಗವಾಗಿ ಚಾಲನೆ ಮಾಡಿಕೊಂಡು ಚಾಸಾ-3 ರವರಿಗೆ ಗುದ್ದಲು ಹೋದಾಗ ಚಾಸಾ-3 ಗಾಬರಿಯಿಂದ

ಕಿರುಚಿಕೊಂಡಾಗ ಚಾಸಾ-2 ರವರು ಮನೆಯಿಂದ ಹೊರಗೆ ಬಂದು ಏನಾಯಿತು ಎಂದು ಕೇಳಿದಾಗ ಆರೋಪಿಯು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅದನ್ನು ಚಾಸಾ-2 ರವರು ಪ್ರಶ್ನಿಸಿದಾಗ ಆರೋಪಿಯು ಏಕಾಏಕಿ ಚಾಸಾ-4 ರವರನ್ನು ಹಿಡಿದುಕೊಂಡು ಎಳೆದು ಕೈಯಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ್ದು, ಅದನ್ನು ಬಿಡಿಸಿಕೊಳ್ಳಲು ಚಾಸಾ-2 ರವರು ಬಂದಾಗ ಆರೋಪಿಯು ಚಾಸಾ-2 ರವರ ಮುಖ, ಬಲಗೈ ಮತ್ತು ಬೆನ್ನು ಮೂಳೆಗೆ ಕೈಯಿಂದ ಹೊಡೆದು ಆಕೆ ಧರಿಸಿದ್ದ ಚೂಡಿದಾರ ಟಾಪನ್ನು ಹಿಡಿದು ಹರಿದುಹಾಕಿ ಸಾರ್ವಜನಿಕರ ಮುಂದೆ ಅವಮಾನ ಮಾಡಿದರು ಎಂದರೆ ಸರಿ. ನಂತರ ಚಾಸಾ-1 ರವರು ಚಾಸಾ-2 ರವ ರನ್ನು ಬಟ್ಟೆಯಿಂದ ಮುಚ್ಚಲು ಹೋದಾಗ ಆರೋಪಿಯು ಜೇಬಿನಿಂದ ಪೆನ್ನಿನ ರೀತಿ ಇರುವ ಚಾಕುವನ್ನು ತೆಗೆದು ಚಾಸಾ-1ರವರ ಬಲ ಮುಂಗೈಗೆ ಚುಚ್ಚಿ ರಕ್ತಗಾಯ ಮಾಡಿದ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಸುಧಾರಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿ ಇನ್ನೊಂದು ಸಾರಿ ನನ್ನ ತಂಟೆಗೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಚಾಸಾ-5 ರವರಿಗೆ ಪ್ರಾಣ ಬೆದರಿಕೆ ಹಾಕಿದ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ವಿವರವಾದ ಹೇಳಿಕೆಯನ್ನು ಪೋಲಿಸರ ಮುಂದೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಚಾಸಾ-2 ರವರು ಧರಿಸಿದ್ದ ಚೂಡಿದಾರ್ ಟಾಪನ್ನು ನೋಡಿದರೆ ಗುರುತಿಸಲು ಕಷ್ಟವಾಗುತ್ತದೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ-2ನ್ನು ನೋಡಿ ಅದನ್ನೇ ಚಾಸಾ-2 ರವರು ಧರಿಸಿದ್ದರು ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು:</u> ಆರೋಪಿತರ ಪರ ಶ್ರೀಮತಿ. VSD ವಕೀಲರಿಂದ:**

ನಾನು ಕಳೆದ 25 ವರ್ಷಗಳಿಂದ ಉದಯನಗರದಲ್ಲಿ ವಾಸವಿದ್ದೇನೆ. ನಾನು ಘಟನೆಯ ದಿನ ರಾತ್ರಿ 9.30 ರಿಂದ 10.00 ಗಂಟೆಗೆ ಘಟನಾ ಸ್ಥಳದಲ್ಲಿ ಇದ್ದೆ. ಆಕ್ಟಿವಾ ಕಪ್ಪುಬಣ್ಣದಾಗಿತ್ತು ಅದರ ನಂಬರ್ ಗೊತ್ತಿಲ್ಲ. ಘಟನೆ ನಾನು ಮನೆಯಲ್ಲಿದ್ದಾಗ ನಡೆಯಿತು. ನಾನು ಅಲ್ಲಿಗೆ ಹೋದಾಗ ಆರೋಪಿಯು ಚಾಸಾ-2 ಮತ್ತು 4 ರವರೊಂದಿಗೆ ಜಗಳ

ಮಾಡುತ್ತಿದ್ದರು. ಆರೋಪಿ ನನಗೆ ಚಿಕ್ಕಂದಿನಿಂದಲೂ ಗೊತ್ತು. ಆರೋಪಿ ಈ ಹಿಂದೆ ಗಲಾಟೆ ಮಾಡಿದ ಬಗ್ಗೆ ಗೊತ್ತಿಲ್ಲ. ಆರೋಪಿ ಕೇವಲ ಕೈಯಿಂದ ಹೊಡೆದರು. ನನಗೆ ಘಟನೆಯ ಬಗ್ಗೆ ಮಾಹಿತಿ ಇಲ್ಲ, ಘಟನೆಯನ್ನು ನಾನು ಕಣ್ಣಿನಿಂದ ನೋಡಿಲ್ಲ ಹಾಗೂ ಯಾರದ್ದೊ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.